೫. ಬಂಟ್ವಾಳ ತಾಲ್ಲೂಕಿನ ಬಿ. ಸಿ. ರೋಡಿನಲ್ಲಿ ಬಸ್ ನಿಲ್ದಾಣವನ್ನು ರಚನೆ ಮಾಡುವುದು.

ಶ್ರೀ ರಮಾನಾಥ ರೈ —ಬಂಟ್ವಾಳ ತಾಲ್ಲೂಕಿನ ಕೇಂದ್ರ ಸ್ಥಾನವಾದ ಬಿ. ಸಿ. ರೋಡಿನಲ್ಲಿ ಹೊಸ ಬಸ್ ನಿಲ್ದಾಣ ರಚನೆ ಮಾಡುವ ಬಗ್ಗೆ ಹಿಂದಿನ ಸರ್ಕಾರ ಭರವಸೆ ಕೊಟ್ಟಿದ್ದು, ಈವರೆಗೆ ಕಾರ್ಯಾರಂಭ ಮಾಡದೆ ಜನರಿಗೆ ಬಹಳ ತೊಂದರೆಯಾಗುತ್ತಿದೆ. ತಾವು ದಯಮಾಡಿ ಬಂಟ್ವಾಳದ ಈ ಬಸ್ ನಿಲ್ದಾಣದ ರಚನೆಯ ಬಗ್ಗೆ ಹೆಚ್ಚಿನ ಮುತುವರ್ಜಿ ವಹಿಸಿ ಪ್ರಯತ್ನಿಸಬೇಕಾಗಿ ಮಾನ್ಯ ರಸ್ತೆ ಸಾರಿಗೆ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಜೆ. ಜಾರ್ಜ್ (ಆಹಾರ ಮತ್ತು ಸಾರಿಗೆ ಸಚಿವರು).—ಮಾನ್ಯ ಅಧ್ಯಕ್ಷರೆ. ನಾನು ಈ ಕೆಳಗಿನ ಹೇಳಿಕೆಯನ್ನು ನೀಡಬಯಸುತ್ತೇನೆ.

ಬಿ. ಸಿ. ರೋಡ್, ದಕ್ಷಿಣಕನ್ನಡ ಜಿಲ್ಲೆಯ, ಬಂಟ್ವಾಳ ತಾಲ್ಲೂಕಿನಲ್ಲಿದೆ. ಬಂಟ್ವಾಳದ ಜನಸಂಖ್ಯೆ ೧೯೮೧ರ ಜನಗಣತಿಯ ಪ್ರಕಾರ ೩೧,೩೭೮ ಆಗಿದೆ. ಈಗ ಬಿ.ಸಿ. ರೋಡ್‌ನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ೧೯೫ ವಾಹನಗಳು ನಿಂತು ಪ್ರಯಾಣಿಕರನ್ನು ಕೊಂಡೊಯ್ಯುತ್ತವೆ.

ಬಂಟ್ವಾಳ ತಾಲ್ಲೂಕಿನ ಸಾರಿಗೆಯನ್ನು ಇನ್ನೂ ರಾಷ್ಟ್ರೀಕರಣ ಮಾಡಿಲ್ಲ. ಪ್ರಯಾಣಿಕರ ಸಂಚಾರ ಅವಶ್ಯಕತೆಗಳನ್ನು ಖಾಸಗಿ ಬಸ್ ಮಾಲೀಕರು ಪೂರೈಸುತ್ತಿದ್ದಾರೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಏಕಸ್ವಾಮ್ಯದಲ್ಲಿರುವ ಕೆಲವು ಮುಖ್ಯ ರಸ್ತೆ ವಿಭಾಗಗಳನ್ನು ಬಿಟ್ಟು ದಕ್ಷಿಣ ಕನ್ನಡ ಜಿಲ್ಲೆಯ ಸಾರಿಗೆಯನ್ನು ರಾಷ್ಟ್ರೀಕರಣ ಮಾಡಿರುವುದಿಲ್ಲ.

ರಾಷ್ಟ್ರೀಕೃತವಾದ ಪ್ರದೇಶದಲ್ಲಿ ಪ್ರಾಮುಖ್ಯತೆಯನ್ನು ಪರಿಗಣಿಸಿ ಕ.ರಾ.ರ. ಸಾ. ಸಂಸ್ಥೆಯು ಬಸ್ ನಿಲ್ದಾಣ ಮತ್ತು ಇತರ ಪ್ರಯಾಣಿಕರ ಸೌಲಭ್ಯವನ್ನು ನಿರ್ಮಿಸುತ್ತದೆ. ಈ ಸೌಲಭ್ಯವನ್ನು ನಂತರ ಭಾಗಶಃ ರಾಷ್ಟ್ರೀಕೃತವಾದ ಮತ್ತು ರಾಷ್ಟ್ರೀಕೃತವಾಗದ ಭಾಗಕ್ಕೆ ಒದಗಿಸುತ್ತದೆ. ಮುಂದೊದಗುವ ಅವಶ್ಯಕತೆಗಳನ್ನು ಪರಿಗಣಿಸಿ ಬಸ್ ನಿಲ್ದಾಣ ನಿರ್ಮಿಸಲು ಬಂಟ್ವಾಳ ಮುನಿಸಿಪಾಲಿಟಿಯವರೊಡನೆ ಸರ್ವೆ ನಂ. ೪೫/ಎ, ೪೪/೧ಎ. ೫೪/೨೮ಲ್ಲಿ ೨ ಎಕರೆ ೨೪ ಗುಂಟೆ ಜಾಗವನ್ನು ಉಚಿತವಾಗಿ ಪಡೆಯಲು ವ್ಯವಹರಿಸಲಾಗಿದೆ. ಆರ್ಥಿಕ ಪರಿಸ್ಥಿತಿ ಮತ್ತು ಸಂಚಾರದ ಪ್ರಾಮುಖ್ಯತೆಗಳನ್ನು ಪರಿಗಣಿಸಿ ಭೂಮಿಯನ್ನು ಪಡೆದ ನಂತರ ಬಸ್ ನಿಲ್ದಾಣವನ್ನು ನಿರ್ಮಿಸಲಾಗುವುದು.

ಅಧ್ಯಕ್ಷರು, ಪುರಸಭೆ, ಬಂಟ್ವಾಳ ಇವರು ಇನ್ನೂ ಭೂಮಿಯನ್ನು ಮಂಜೂರು ಮಾಡ ಬೇಕಾಗಿದೆ.

ಇದಲ್ಲದೆ, ಅಲ್ಲಿ ಈಗಾಗಲೇ ಮುನಿಸಿಪಾಲಿಟಿಯವರ ಒಂದು ಬಸ್ ಸ್ಟ್ಯಾಂಡ್ ಇದೆ. ಅದನ್ನಾದರೂ ನಮಗೆ ಬಿಟ್ಟುಕೊಟ್ಟರೆ ಆ ಬಸ್ ಸ್ಟ್ಯಾಂಡನ್ನು ಕೆ.ಎಸ್.ಆರ್.ಟಿ.ಸಿ. ಬಸ್ ಸ್ಟ್ಯಾಂಡಾಗಿ ಡೆವಲಪ್ ಮಾಡುತ್ತೇವೆ.

೬. ಕರ್ಕಿ ಗ್ರಾಮದ ವಾಸಿ ತುಳಸುನಾರುಗೌಡ ಎನ್ನುವವರು ಶಂಕೆಯಾಸ್ಪದ ರೀತಿಯಲ್ಲಿ ಸಾವನ್ನಪ್ಪಿರುವ ಬಗ್ಗೆ.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೆ. ತುಳಸುನಾರುಗೌಡ ಈತನು ಹೊನ್ನಾವರ ತಾಲ್ಲೂಕು ಕರ್ಕಿ ಗ್ರಾಮದ ನಿವಾಸಿಯಾಗಿದ್ದ. ಈತನನ್ನು ೧೬-೩-೮೬ಕ್ಕೆ ಒಬ್ಬ ಮದುಕರ ನಾಗಪ್ಪ ಶೆಟ್ಟಿ ಎನ್ನುವವರು ಮಂಗಳೂರಿಗೆ ಕೆಲಸಕ್ಕೆಂದು ಕರೆದುಕೊಂಡು ಹೋದರು.

ಆದರೆ ದಿನಾಂಕ ೨೫-೩-೮೬ನೇ ಬುಧವಾರ ವಾಹನ ನಂ. ಸಿಎನ್‌ಒ. ೨೯೭೦ ಮೇಲೆ ಮಂಗಳೂರಿನಿಂದ ಕರ್ಕಿಗೆ ಸದರಿಯವರ ಶವವನ್ನು ತರಲಾಯಿತು. ಕೆಲಸಕ್ಕೆ ತೆಗೆದುಕೊಂಡು ಹೋದವರನ್ನು ವಿಚಾರಿಸಿದರೆ ಏನೆಂದೂ ವಿಷಯ ತಿಳಿಸಲಿಲ್ಲ. ನನ್ನ ಹತ್ತಿರ ಮರಣ ಪಟ್ಟವನ ಸಹೋದರ ಬಂದು ವಿಷಯ ತಿಳಿಸಿದಾಗ ಹೊನ್ನಾವರ ಸಬ್ ಇನ್ಸ್‌ಪೆಕ್ಟರ್ ವಿಚಾರಿಸಲು ಫೋನ್ ಮೂಲಕ ತಿಳಿಸಿದೆ ಹಾಗೂ ಕರ್ಕಿಯ ಉಪ ಪ್ರಧಾನರು ಹೊನ್ನಾವರ ಪೋಲೀಸರಿಗೆ ಪಿರ್ಯಾದಿ ಕೊಟ್ಟರು. ಹೊನ್ನಾವರ ಸಬ್ ಇನ್ಸ್‌ಪೆಕ್ಟರ್‌ರವರು ತನಗೆ ಸಂಬಂಧಿಸಿದ್ದಲ್ಲ. ದಕ್ಷಿಣ ಕನ್ನಡ ಪೋಲೀಸರಲ್ಲಿ ವಿಚಾರಿಸಿ ಎಂದು ತಿಳಿಸಿದರು. ಯಾವ ಪ್ರಯತ್ನವೂ ಸಫಲವಾಗಲಿಲ್ಲ. ಪೋಲೀಸರು ಸಹಾಯ ಮಾಡಲಿಲ್ಲ.

ಮರುದಿನ ಮದುಕರ ನಾಗಪ್ಪ ಶೆಟ್ಟಿ ಮಧ್ಯಸ್ಥಿಕೆ ವಹಿಸಿದ. ಕೆ. ಐ. ಬೆಟರ್ ಹತ್ತಿರ ೫೦೦೦ ರೂಪಾಯಿ ಕೊಟ್ಟರು. ಆ ಹಣ ಪಡೆದು ಜಟ್ಟು ನಾಗುಗೌಡ ವಗೈರೆಯವರು ಸೇರಿ ಶವ ಸಂಸ್ಕಾರ

ಮಾಡಿದ್ದಾರೆ. ವ್ಯಕ್ತಿ ಹೇಗೆ ಮರಣ ಪಟ್ಟ ? ಅದು ಕೊಲೆಯೆ ? ಸ್ವಾಭಾವಿಕ ಸಾವೆ ? ಎನ್ನುವ ಬಗ್ಗೆ ತನಿಖೆ ನಡೆಸಲು ಕಾರವಾರ ಎಸ್. ಪಿ. ಯವರಿಗೆ ಆದೇಶಿಸಿ ಫಿರ್ಯಾದು ತೆಗೆದುಕೊಳ್ಳಲು ನಿರಾಕರಿಸಿದ ಹೊನ್ನಾವರ ಸಬ್ ಇನ್ಸ್‌ಪೆಕ್ಟರ್ ಇವರ ಬಗ್ಗೆ ಕಾನೂನು ಕ್ರಮ ಕೈಗೊಳ್ಳುವುದರ ಜೊತೆಗೆ ಪ್ರಕರಣದ ಸಮಗ್ರ ಹಾಗೂ ಇದರ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಮುಖ್ಯ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ವಾರ್ತಾ, ಪ್ರವಾಸೋದ್ಯಮ ಮತ್ತು ಕೈಗಾರಿಕಾ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಓದುತ್ತೇನೆ.

ಸನ್ಮಾನ್ಯ ಶಾಸಕರು ಎತ್ತಿದಂಥ ಈ ಪ್ರಕರಣವು ಮಂಗಳೂರು ದಕ್ಷಿಣ ಪೋಲೀಸ್ ಠಾಣೆಯಲ್ಲಿ ಯು. ಡಿ. ಆರ್, ನಂ. ೧೬೯ ರಲ್ಲಿ ೧೭೪ ಸಿ ಆರ್ ಪಿ ಸಿ ಕಲಂನ ಪ್ರಕಾರ ೨೪-೩-೧೯೯೦ ರಂದು ದಾಖಲಾಗಿದೆ. ಶವದ ಪಂಚನಾಮೆ ಆಗುವಾಗ ಕರ್ಕಿ ಗ್ರಾಮದಿಂದ ಮೃತರ ಸಹೋದರ ಶ್ರೀ ದೇವನಾರುಗೌಡನನ್ನು ಕರೆಸಲಾಗಿದ್ದು, ಪಂಚನಾಮೆಯಲ್ಲಿ ತನ್ನ ಸಹೋದರ ತುಳಸುನಾರುಗೌಡರೂ. ೫೦೦ ಕಳೆದುಕೊಂಡ ಆಘಾತದಿಂದ ಆತ್ಮಹತ್ಯೆ ಮಾಡಿಕೊಂಡಿರಬಹುದೆಂದು ಅಭಿಪ್ರಾಯ ಪಟ್ಟಿರುತ್ತಾರೆ. ಶವದ ಮೇಲೆ ನೇಣಿನಿಂದಾದ ಗುರುತು ಬಿಟ್ಟರೆ ಬೇರಾವ ಹೊರ ಒಳಗಾಯಗಳು ಕಂಡು ಬಂದಿಲ್ಲ ರಾಸಾಯನಿಕ ಪರೀಕ್ಷೆಗಾಗಿ ವಿಸೇರಾ ಕಾದಿರಿಸಲಾಗಿದೆ.

ದಿನಾಂಕ ೨೫-೩-೯೦ ರಂದು ಶವವನ್ನು ಮೃತನ ಸ್ವಗ್ರಾಮವಾದ ಕರ್ಕಿಗೆ ತರಲಾಗಿ ಮಾಜಿ ಶಾಸಕರಾದ ಡಾ. ಎಂ. ಪಿ. ಕರ್ಕಿಯವರು ಪಿ. ಎಸ್. ಐ. ರವರಿಗೆ ತುಳಸುವಿನ ಮರಣದ ಕಾರಣ ಪರಿಶೀಲಿಸಲು ಕೇಳಿಕೊಂಡ ಮೇರೆಗೆ ಪಿ. ಎಸ್. ಐ ರವರು ಕೂಡಲೇ ಕಾರ್ಯಪ್ರವೃತ್ತರಾಗಿ ಕರ್ಕಿಗೆ ತೆರಳಿ ವಿವರಗಳನ್ನು ಸಂಗ್ರಹಿಸಿದರಲ್ಲದೆ ಮಂಗಳೂರು ದಕ್ಷಿಣ ಪೋಲೀಸರನ್ನು ಸಂಪರ್ಕಿಸಿಗುತ್ತಾರೆ. ಈ ಬಗ್ಗೆ ಹೊನ್ನಾವರ ಪೋಲೀಸ್ ಠಾಣೆಯಲ್ಲಿ ಯಾವುದೇ ಪ್ರಕಾರದ ದೂರನ್ನು ಕೊಟ್ಟಿಲ್ಲ. ಆದರೆ ಪಿ. ಎಸ್ ಐ. ರವರು ಮಾಜಿ ಶಾಸಕರಾದ ಡಾ. ಕರ್ಕಿಯವರ ಟೆಲಿಫೋನ್ ಸಂದೇಶವನ್ನು ಠಾಣಾ ದಿನಚರಿಯಲ್ಲಿ ನಮೂದಿಸಿ ಕಾರ್ಯಪ್ರವೃತ್ತರಾಗಿದ್ದುದು ಕಂಡುಬರುತ್ತದೆ. ಮಾನ್ಯ ಶಾಸಕರು ಎಸ್. ಎಚ್. ಓ. ಹೆಡ್ ಕಾನ್ಸ್‌ಟೇಬಲ್ ೩೮೬ ಶ್ರೀ ಪಿ. ಎಲ್. ನಾಯಕ್ ಇವರನ್ನು ಫೋನ್ ಮೂಲಕ ಸಂಪರ್ಕಿಸಿದಾಗ ಸದರಿ ಹೆಡ್ ಕಾನ್‌ಸ್ಟೇಬಲ್‌ರವರು ಈಗಾಗಲೇ ಪಿ. ಎಸ್. ಐ. ರವರು ಕರ್ಕಿಗೆ ವಿಚಾರಣೆಗಾಗಿ ತೆರಳಿದ್ದಾರೆಂದು ತಿಳಿಸಿರುವುದಾಗಿ ತಿಳಿದು ಬಂದಿದೆ.

ಶ್ರೀ ಆರ್. ಎನ್. ನಾಯಕ್.—ಸಹೋದರ ಅಲ್ಲಿ ಹೋಗಿಲ್ಲ. ಈ ವಿಚಾರವನ್ನು ಸಿ.ಓ.ಡಿ. ಗೆ ಹಾಕಿಸಿ. ನಿಜ ಹೊರಗೆ ಬರಲಿ. ಇದು ಕೊಲೆ ಪ್ರಕರಣ. ಇದಕ್ಕೆ ಏನಾದರೂ ಮಾಡಬೇಕು, ಸಿ. ಓ. ಡಿ. ಗೆ ಹಾಕಿಸಿ ನಿಮ್ಮ ಪಕ್ಷದಲ್ಲೇ ಇದ್ದುಕೊಂಡು ಇಂಥದ್ದು ಮಾಡುವುದಕ್ಕೆ ಆಗುವುದಿಲ್ಲ ಎಂದರೆ ಪೋಲೀಸರು ಏನೂ ಮಾಡುವುದಿಲ್ಲ. ಸಿ. ಓ. ಡಿ. ಗೆ ಹಾಕಿಸಿ ಏನೂ ತೊಂದರೆಯಾಗುವುದಿಲ್ಲ ದಯವಾಡಿ ಇದರ ಬಗ್ಗೆ ಹೇಳಿ, ೧೨ ವರ್ಷದವನನ್ನು ಮಂಗಳೂರಿಗೆ ಕರೆದುಕೊಂಡು ಹೋಗಿ ಮರ್ಡರ್ ಮಾಡಿದ್ದಾರೆ.

ಅಧ್ಯಕ್ಷರು.—ಸಿಸಿರಲ್ಲಿ ಈ ರೀತಿ ಮಾತನಾಡುವುದಕ್ಕೆ ಬರುವುದಿಲ್ಲ.

ಶ್ರೀ ಆರ್. ಎನ್. ನಾಯಕ್.—ಇನ್ಯಾವುದರಲ್ಲಿ ಬರುತ್ತದೆ ? ಸರ್ಕಾರಕ್ಕೆ ಅರ್ಜಿ ಕೊಟ್ಟಾಗ.....

ಅಧ್ಯಕ್ಷರು.—ರೂಲ್ಸ್ ಪುಸ್ತಕ ಓದಿದರೆ ಗೊತ್ತಾಗುತ್ತದೆ, ಸದನದಲ್ಲಿ ಹೇಗೆ ಎತ್ತಬೇಕು ಎಂಬುದು.

ಶ್ರೀ ಆರ್. ಎನ್. ನಾಯಕ್.—ರೂಲ್ಸ್ ಬುಕ್ಕನ್ನು ಇಟ್ಟುಕೊಂಡು ಶಿಕ್ಷಕರು ಪಾಠ ಹೇಳಬೇಕು.

ಅಧ್ಯಕ್ಷರು.—ಅದು ನಿಮ್ಮ ಅಭಿಪ್ರಾಯ.

ಶ್ರೀ ಆರ್. ಎನ್ ನಾಯಕ್.—ಯಾವುದರಲ್ಲಿ ಎತ್ತಬೇಕು ?

MR. SPEAKER.—Please resume your seat. I can not answer to you.